# ಕರ್ನಾಟಕ ವಿಧಾನ ಪರಿಷತ್

| | |
|---|---|
| ಮಾನ್ಯ ಸದಸ್ಯರ ಹೆಸರು | : ಡಾ|| ಆರತಿ ಕೃಷ್ಣ(ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : **1396(1711)** |
| ಉತ್ತರಿಸಬೇಕಾದ ದಿನಾಂಕ | : 18.03.2026(ಕಂದಾಯ ಇಲಾಖೆಯಿಂದ ವರ್ಗಾವಣೆ) |
| ಉತ್ತರಿಸಬೇಕಾದ ಸಚಿವರು | : ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಿವಂಗತ ಅಪ್ಪುರಾವ್ ಗುಲ್ಯಾಡಿ ರವರ ಮನವಿಯ ಮೇರಗೆ, ಬೆಂಗಳೂರಿನ ಜಯನಗರ ಹಾಗೂ ಇತರೆ ಸ್ಥಳಗಳಲ್ಲಿ ವಾಸಿಸುತ್ತಿದ್ದು, ದಲಿತ ಕ್ರಿಯಾ ಸಮಿತಿಯ ಸದಸ್ಯರಿಗೆ ಆಶ್ರಯ ಯೋಜನೆಯಡಿ ನಿವೇಶನ ನೀಡಲು ಬೆಂಗಳೂರು ದಕ್ಷಿಣ, ಉತ್ತರ ಹಾಗೂ ಪೂರ್ವ(ಅಪರ) ತಾಲ್ಲೂಕಿನ ತಹಶೀಲ್ದಾರರಿಂದ ವರದಿ ಪಡೆದು, ನಿವೇಶನ ಹಂಚಿಕೆ ಮಾಡುವ ಸಲುವಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಪತ್ರ ಬರೆಯಲಾಗಿದೆಯೇ; ಸಂಖ್ಯೆ:ಆಶ್ರಯ/ಸಿಆರ್-126/2002-03, ದಿನಾಂಕ:20.09.2024ರಂದು ಹಾಗಿದ್ದಲ್ಲಿ, ಅರ್ಹ 1300 ಫಲಾನುಭವಿಗಳ ಪೈಕಿ ಎಷ್ಟು ಜನರಿಗೆ ನಿವೇಶನ ಹಂಚಿಕೆ ಮಾಡಲಾಗಿರುತ್ತದೆ;(ವಿವರಗಳನ್ನು ಒದಗಿಸುವುದು) | ತಹಶೀಲ್ದಾರ್, ಬೆಂಗಳೂರು ದಕ್ಷಿಣ ರವರ ವರದಿಯನ್ವಯ ಶ್ರೀ ಅಪ್ಪುರಾವ್ ಗುಲ್ಯಾಡಿ, ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ದಲಿತ ಕ್ರಿಯಾ ಸಮಿತಿ ಸದಸ್ಯರುಗಳಿಗೆ ನಿವೇಶನ ನೀಡುವ ವಿಚಾರವಾಗಿ ದಲಿತ ಕ್ರಿಯಾ ಸಮಿತಿಯ ಸದಸ್ಯರಾದ 1. ಶ್ರೀಮತಿ ಚಿಕ್ಕಬೀರಮ್ಮ ಕೋಂ ಕೆ.ಹುಚ್ಚೇಗೌಡ(ಅಡ್ಡ ಹೆಸರು ಪುಟ್ಟಸ್ವಾಮಿ) 2. ಕೆ.ಸಂತೋಷ್, 3. ಕೆ.ಸಂಪತ್ ಕುಮಾರ್, 4. ಶ್ರೀಮತಿ ಭಾರತಿ ಕೋಂ ರಾಜು, 5. ಶ್ರೀಮತಿ ಶಿವಮ್ಮ ಕೋಂ ಶಿವಣ್ಣ, 6. ಶ್ರೀ ಬಾಲಜಿ ಬಿನ್ ಬೀರಪ್ಪ ರವರುಗಳಿಗೆ ನಿವೇಶನ ನೀಡುವ ಸಂಬಂಧ ಅರ್ಜಿದಾರರ ವಿಳಾಸಕ್ಕೆ ಭೇಟಿ ನೀಡಲಾಗಿ, ಬೆಂಗಳೂರು ದಕ್ಷಿಣ ತಾಲ್ಲೂಕು ವ್ಯಾಪ್ತಿಯಲ್ಲಿನ ಆಡುಗೋಡಿಯಲ್ಲಿ ವಾಸವಿರುವ ಶ್ರೀಮತಿ ಚಿಕ್ಕಬೀರಮ್ಮ ರವರು ಪೊಲೀಸ್ ವಸತಿ ಗೃಹದಲ್ಲಿ ವಾಸವಿದ್ದು, ಇವರ ಪತಿ ಪೊಲೀಸ್ ಸಿ.ಎ. ಆರ್ ಆಗಿ ಸೇವೆ ಸಲ್ಲಿಸಿರುವುದಾಗಿ ದಿನಾಂಕ: 17.03.2026 ರ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ವರದಿ ಮಾಡಿರುತ್ತಾರೆ<br><br>ಮುಂದುವರಿದು ಶ್ರೀಮತಿ ಚಿಕ್ಕಬೀರಮ್ಮ ರವರಿಗೆ ಕೆ.ಸಂತೋಷ್, ಕೆ.ಸಂಪತ್ ಕುಮಾರ್ ರವರುಗಳು ಅಣ್ಣನ ಮಕ್ಕಳಾಗಿದ್ದು, ಶ್ರೀಮತಿ ಭಾರತಿ ಕೋಂ ರಾಜು, ಮತ್ತು ಶ್ರೀಮತಿ ಶಿವಮ್ಮ ಕೋಂ ಶಿವಣ್ಣ ಇವರ ಅತ್ತಿಗೆಯರಾಗಿದ್ದು, ಶ್ರೀ ಬಾಲಜಿ ಬಿನ್ ಬೀರಪ್ಪ ಅಕ್ಕನ ಮಗನಾಗಿದ್ದು, ಅರ್ಜಿದಾರರಾದ ಶ್ರೀಮತಿ ಚಿಕ್ಕಬೀರಮ್ಮ ರವರ ಪತಿ ಪೊಲೀಸ್ ಇಲಾಖೆಯಲ್ಲಿ ಇರುವುದರಿಂದ, ಶ್ರೀಮತಿ ಭಾರತಿ ರವರ ಪತಿ ಕೇಂದ್ರ ರೇಷ್ಮೆ ಇಲಾಖೆಯ ನೌಕರರಾಗಿರುವುದರಿಂದ, ಕೆ.ಸಂತೋಷ್ ಮತ್ತು ಶ್ರೀ ಕೆ.ಸಂಪತ್, ಶಿವಮ್ಮ ರವರು ಅರ್ಜಿಯಲ್ಲಿ ನೀಡಿರುವ ವಿಳಾಸದಲ್ಲಿ ವಾಸವಿಲ್ಲದಿರುವುದರಿಂದ, ಶ್ರೀ ಬಾಲಾಜಿ ಯವರು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ಸದರಿಯವರುಗಳು ಉಚಿತ ನಿವೇಶನ ಪಡೆಯಲು ಅನರ್ಹರಾಗಿರುತ್ತಾರೆಂದು ಸದರಿಯವರ ಮನವಿಗಳನ್ನು ವಿಲೇ ಇಡಲಾಗಿದೆ ಎಂದು ತಿಳಿಸಿರುತ್ತಾರೆ.<br><br>ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು ರವರ ವರದಿಯಂತೆ ದಿವಂಗತ ಶ್ರೀ ಅಪ್ಪುರಾವ್ ಗುಲ್ಯಾಡಿ ರವರ ಮನವಿ ಮೇರೆಗೆ ಬೆಂಗಳೂರಿನ ಜಯನಗರ ಹಾಗೂ ಇತರೆ ಸ್ಥಳಗಳಲ್ಲಿ ವಾಸಿಸುತ್ತಿರುವ ದಲಿತ ಕ್ರಿಯಾ ಸಮಿತಿಯ ಸದಸ್ಯರಿಗೆ ಆಶ್ರಯ ಯೋಜನೆಯಡಿಯಲ್ಲಿ ನಿವೇಶನ ನೀಡಿರುವುದು ಕಂಡುಬಂದಿರುವುದಿಲ್ಲ ಹಾಗೂ ದಿನಾಂಕ: 02.04.2025 ರಂದು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಸರ್ಕಾರಿ ಜಮೀನನ್ನು ಮಂಜೂರು ಮಾಡಲು ಕೋರಿರುವ ಮೇರೆಗೆ ಕಾನೂನು ರೀತಿಯ ಕ್ರಮಕ್ಕೆಗೊಳ್ಳಲು ಸೂಚಿಸಿರುವ ಪತ್ರದನ್ವಯ ಜಮೀನು ಮಂಜೂರಾತಿಗೆ ಸ್ಥಳ ತನಿಖೆ ಮಾಡಿ, ಜಮೀನು ಲಭ್ಯವಿದ್ದಲ್ಲಿ, ಪ್ರಸ್ತಾವನೆ ಸಲ್ಲಿಸಲು ಉಪ ತಹಶೀಲ್ದಾರ್ ರವರಿಗೆ ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ವರದಿ ಮಾಡಿರುತ್ತಾರೆ |

| | | |
|---|---|---|
| ಆ) | ಸದರಿ ವಿಷಯಕ್ಕೆ ಸಂಬಂದಿಸಿದಂತೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ದಿನಾಂಕ:26.02.2008 (ಪತ್ರ ಸಂಖ್ಯೆ: RGRHCL 12 MIS 440 2000-3164),ದಿನಾಂಕ:13.09.2012(ಪತ್ರ ಸಂಖ್ಯೆ: RGRHCL 12 MIS 890 2000) ಹಾಗೂ ದಿನಾಂಕ:06.03.2013 ರಂದು(ಪತ್ರ ಸಂಖ್ಯೆ: RGRHCL 12 MIS 954 2000) ಬೆಂಗಳೂರು ನಗರ ಜಿಲ್ಲಾಧಿಕಾರಿಗಳಿಗೆ ಬರೆದ ಪತ್ರಗಳ ಮೇಲೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕೈಗೊಂಡ ಕ್ರಮಗಳೇನು;(ವಿವರ ಮಾಹಿತಿ ಒದಗಿಸುವುದು) | ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಪತ್ರದನ್ವಯ ಶ್ರೀ ಅಪ್ಪುರಾವ್ ಗುಲ್ವಾಡಿ ಪ್ರಧಾನ ಕಾರ್ಯದರ್ಶಿಗಳು ಕರ್ನಾಟಕ ದಲಿತ ಕ್ರಿಯಾ ಸಮಿತಿ ಸದಸ್ಯರುಗಳಿಗೆ ನಿವೇಶನ ನೀಡುವ ವಿಚಾರವಾಗಿ ಸುಮಾರು 40.00 ಎಕರೆ ಜಮೀನನ್ನು ಹಸ್ತಾಂತರಿಸಲು ಕೋರಿದ್ದು, ಸದರಿ ವಿಚಾರವಾಗಿ ಜಮೀನು ಮಂಜೂರಾತಿಗೆ ಸ್ಥಳ ತನಿಖೆ ಮಾಡಿ, ಜಮೀನು ಲಭ್ಯವಿದ್ದಲ್ಲಿ ಪ್ರಸ್ತಾವನೆ ಸಲ್ಲಿಸಲು ತಹಶೀಲ್ದಾರ್ ರವರಿಗೆ ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ವರದಿ ಮಾಡಿರುತ್ತಾರೆ |
| ಇ) | ಸದರಿ ದಲಿತ ಕ್ರಿಯಾ ಸಮಿತಿಯವರು ಮಾನ್ಯ ಮುಖ್ಯಮಂತ್ರಿಯವರಿಗೆ ಸಲ್ಲಿಸಿರುವ ಮನವಿಯು ತಲುಪಿದೆಯೇ; ತಲುಪಿದ್ದಲ್ಲಿ ಪತ್ರದ ಮೇಲೆ ಕೈಗೊಳ್ಳಲಾದ ಕ್ರಮಗಳೇನು? (ವಿವರ ಒದಗಿಸುವುದು) | ಹೌದು<br><br>ಸದರಿ ವಿಷಯದ ಸಂಬಂಧ ಸನ್ಮಾನ್ಯ ಮುಖ್ಯಮಂತ್ರಿಯವರ ಕಾರ್ಯಾಲಯದಿಂದ ಪತ್ರ ಸ್ವೀಕೃತವಾಗಿದ್ದು, ಈ ಬಗ್ಗೆ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ಮತ್ತು ಕಾರ್ಯನಿರ್ವಾಹಣಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಬೆಂಗಳೂರು ದಕ್ಷಿಣ ತಾಲ್ಲೂಕು ರವರಿಗೆ ಅಗತ್ಯ ಕ್ರಮಕೈಗೊಂಡು ವರದಿ ಸಲ್ಲಿಸಲು ದಿನಾಂಕ:26.08.2024 ರಂದು ಪತ್ರ ಬರೆಯಲಾಗಿದೆ ಎಂದು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ವರದಿ ಮಾಡಿರುತ್ತಾರೆ |

ಸಂಖ್ಯೆ:ವಇ 176 ಹೆಚ್ಎಎಂ 2026

B. Zameer

**(ಬಿ.ಝಡ್ ಜಮೀರ್ ಅಹಮದ್ ಖಾನ್)**
ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ
ಕಲ್ಯಾಣ ಸಚಿವರು.